ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Monday, 17th July, 1972 / Ashadha 26, 1894 (Saka Era)

The House met in the Assembly Chamber, Vidhana Soudha, at One of the Clock.

MADAM SPEAKER (SMT. K. S. NAGARATHNAMMA) in the Chair.

STARRED QUESTIONS

(to which oral answers were given)

Survey of Upper Bhadra Project

123. Sri C. R. MOHAMED SAIFUDDIN (Chitradurga).—

Will the Minister of State for Major Irrigation be pleased to state :—

(*a*) whether the proposed Upper Bhadra Project Survey has been completed ;

(*b*) whether the report of the Krishna-Godavari Tribunal has been received by the Government ;

(*c*) if so, the recommendation of the Tribunal ;

(*d*) if not, the stage at which it is pending ;

(*e*) the estimated Cost of the Project ;

(*f*) the estimated command area to be brought under cultivation under this project ?

Sri H. N. NANJE GOWDA (Minister of State for Major Irrigation).–

(*a*) No.

(*b*) No.

(*c*) to (*f*) Does not arise.

Sri C. R. MOHAMED SAIFUDDIN.—Whether it has come to the notice of Government that in different places in the said area some Boards have been installed ? The reply furnished by the Hon. Minister is not satisfactory.

† Sri H. N. NANJE GOWDA.—The question was whether the survey work has been completed; for which I have stated 'no'.

Sri C. R. MOHAMED SAIFUDDIN.—At what stage the survey work is ?

Sri H. N. NANJE GOWDA.—It is at different stages.

ಶ್ರೀ ಸಿ. ಆರ್. ಮಹಮದ್ ಸೈಫುದ್ದೀನ್.—ಈ ಯೋಜನೆಯ ಅಂದಾಜು ವೆಚ್ಚವೆಷ್ಟು ಎಂಬುದನ್ನು ನಿಗದಿ ಮಾಡಲಾಗಿದೆಯೇ ?

ಶ್ರೀ ಎಚ್. ಎನ್. ನಂಜೇಗೌಡ.—ಮೊದಲನೇ ಟೆಂಟೆಟೀವ್ ಅಂದಾಜಿದ ಪ್ರಕಾರ ಅಲ್ಲಿ 36 ಟಿ. ಎಂ. ಸಿ. ಎಫ್ಟಿ ನೀರನ್ನು ತಡೆಯಬೇಕೆಂದು ಅಂದಾಜು ಮಾಡಲಾಗಿತ್ತು. ಮತ್ತೆ ಆ ಅಂದಾಜನ್ನು ರಿವೈಜ್ ಮಾಡಲಾಯಿತು. ಅಲ್ಲಿ 18 ಟಿ. ಎಂ. ಸಿ. ಎಫ್ಟಿ ನೀರನ್ನು ತಡೆಯಬೇಕೆಂದು ಅಂದಾಜು ಮಾಡಲಾಯಿತು. ಮೊದಲನೇ ಅಂದಾಜಿದ ಪ್ರಕಾರ 56 ಕೋಟಿ 38 ಲಕ್ಷ ರೂಪಾಯಿ ಆಗಿತ್ತು. ಎರಡನೆಯ ಅಂದಾಜಿಗೆ 28 ಕೋಟಿ 66 ಲಕ್ಷ ರೂಪಾಯಿ ಅಂದಾಜಾಗಿತ್ತು.

ಶ್ರೀ ಪಾಟೀಲ್ ಪಾಪಯ್ಯ ನಾಯಕ್.—ಇದನ್ನು ಬೇಗ ಪೂರ್ಣಗೊಳಿಸಬೇಕೆಂಬ ಆಸೆ ಸರ್ಕಾರದವರಿಗೆ ಇದೆಯೇ ?

ಶ್ರೀ ಎಚ್. ಎನ್. ನಂಜೇಗೌಡ.—ನಾವು ಇಲ್ಲಿ ಪದೇ ಪದೇ ಹೇಳುತ್ತಲೇ ಇದ್ದೇವೆ. ಈ ವಿಚಾರ ಟ್ರಿಬ್ಯುನರ್ ಮುಂದಿದೆ. ಅಲ್ಲಿ ತೀರ್ಮಾನವಾಗುವವರೆಗೆ ಇಲ್ಲ ಏನು ಮಾಡುವುದಕ್ಕೂ ಬರುವುದಿಲ್ಲ.

ಶ್ರೀ ಬಾಪೂಗೌಡ ರಾಯಪ್ಪ.—ಆ ಟ್ರಿಬ್ಯೂನರ್ ಡಿಸಿಷನ್ ಯಾವಾಗ ಮುಗಿಯಬಹುದು ?

ಶ್ರೀ ಎಚ್. ಎನ್. ನಂಜೇಗೌಡ.—ಈಗಾಗಲೆ ಎವಿಡೆನ್ಸ್ ಮುಗಿದಿದೆ. ಇನ್ನು ಇರತಕ್ಕದ್ದು ಅರ್ಗ್ಯುಮೆಂಟ್, ಅದು ಮುಗಿದ 4-5 ತಿಂಗಳಲ್ಲೇ ನಮಗೆ ವರದಿ ಬರಬಹುದು. ಅಂತೂ ಇನ್ನು 5-6 ತಿಂಗಳಲ್ಲಿ ಅದು ತೀರ್ಮಾನವಾಗಬಹುದೆಂದು ನನಗೆ ಅನಿಸುತ್ತಿದೆ.

ಶ್ರೀ ಸಿ. ಆರ್. ಮಹಮದ್ ಸೈಫುದ್ದೀನ್.—ಆ ಕಮಿಷನ್ನಿನವರ ವರದಿ ಫೇವರಬಲ್ಲಾಗಿ ಬಂದರೆ ಈ ಪ್ರಾಜೆಕ್ಟ್‌ನ್ನು ಕೂಡಲೆ ಕೈಗೊಳ್ಳುತ್ತೀರಾ ?

ಶ್ರೀ ಎಚ್. ಎನ್. ನಂಜೇಗೌಡ.—ನಮ್ಮ ಅಭಿಪ್ರಾಯದ ಪ್ರಕಾರ ನಮಗೆ ದೊರೆಯುತಕ್ಕ ನೀರೆಲ್ಲಾ ದೊರತರೆ ನಾವು ಅಲ್ಲಿ ಮೊದಲನ ಅಂದಾಜು ಪ್ರಕಾರ 36 ಟಿ. ಎಂ. ಸಿ. ಎಫ್ಟಿ ಗೆ ಪ್ರಾಜೆಕ್ಟನ್ನು ಕಟ್ಟುತ್ತೇವೆ.

Upper Bhadra Project and Hebbe Anecut

302. Sri M. MALLAPPA (Birur).—

Will the Minister of State for Major Irrigation be pleased to state :—

(*a*) the nnmber of Schemes proposed to be taken up in Chikmagalur District for providing irrigation facilities to develop agriculture ;

(*b*) the stage at which the proposed Upper Bhadra Project and Hebbe Anicut is pending for execution ;

(*c*) the number of acres of land that will be irrigated from Upper Bhadra Project and Habbe Anicut respectively ;

† Astericks indicates that the remarks or speeches have not been revised by the member concerned.